ಗಂಬ್ಬಿ ತಾಲ್ಲೂಕು ಭೋಗಸಂದ್ರ ಗ್ರಾಮಕ್ಕೆ ಕೆರೆ ಕಟ್ಟಿಸುವ ವಿಚಾರ

೨೯ (೫೯) ಶ್ರೀ ಜಿ. ಎಸ್. ಶಿವನಂಜಪ್ಪ (ಗಂಬ್ಬಿ).—ಮಾನ್ಯ ನಿರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಗಂಬ್ಬಿ ತಾಲ್ಲೂಕು ನಿಟ್ಟೂರು ಹೋಬಳಿ, ಭೋಗಸಂದ್ರ ಗ್ರಾಮಸ್ಥರು ತಮ್ಮ ಗ್ರಾಮಕ್ಕೆ ನೀರಾವರಿ ಕೆರೆಯನ್ನು ಮಂಜೂರಾತಿ ಮಾಡಲು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

೨) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? ಮತ್ತು ಈ ಸದರಿ ಕೆರೆಯನ್ನು ಯಾವಾಗ ಕಟ್ಟಲಾಗುತ್ತದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

೧) ಹೌದು.

೨) ವಿವರವಾದ ತನಿಖೆ ನಡೆಯುತ್ತಿದೆ. ಯೋಜನೆಯು ವರದಿ ಬಂದ ಮೇಲೆ ಪರಿಶೀಲಿಸಲಾಗುವುದು.

ಶ್ರೀ ಜಿ ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ವೊದಲನೆಯ ಪ್ರಶ್ನೆಗೆ ಹೌದು ಎಂದು ಹೇಳುತ್ತಿದ್ದಾರೆ, ಎಷ್ಟು ವರ್ಷದಿಂದ ಈ ಕೆರೆ ಆಗಬೇಕೆಂದು ಇವರಿಗೆ ಮನವಿ ಮಾಡಿಕೊಳ್ಳುವುದು, ಇನ್ನು ೨ನೇಯ ಪ್ರಶ್ನೆಗೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಪರಿಶೀಲನೆ ಮಾಡುವುದಕ್ಕೆ ಎಷ್ಟು ವರ್ಷಗಳು ಇವರಿಗೆ ಬೇಕು ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಬಸವರಾಜ ಪಾಟೀಲ್ ಅತ್ನೂರು.—ಮಾನ್ಯ ಅಧ್ಯಕ್ಷರೇ ಈಗಾಗಲೇ ಈ ಕೆರೆಯ ಎಸ್ಟಿಮೇಟನ್ನು ಕಳುಹಿಸಿಕೊಡಲು ಕೇಳಲಾಗಿದೆ, ಎಸ್ಟಿಮೇಟ್ ಬಗ್ಗೆ ಸಂಪೂರ್ಣವಾದ ವಿವರ ಬಂದನಂತರ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಈ ವರ್ಷದಲ್ಲಿ ಏನಾದರೂ ಮಾಡುತ್ತೀರೋ ?

ಶ್ರೀ ಬಸವರಾಜಪಾಟೀಲ್ ಅತ್ನೂರ್.—ಈ ವರ್ಷದ ಬಜೆಟ್‌ನಲ್ಲಿ ಆದಷ್ಟು ಮಟ್ಟಿಗೆ, ಈ ಕೆರೆಗೆ ಹಣವನ್ನು ಒದಗಿಸಲು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ವಿಧವೆಯರ ಮಾಶಾಸನದ ಬಗ್ಗೆ

೩೦ (೪೬) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆವಿಗೆ ಎಷ್ಟು ಜನ ವಿಧವೆಯವರಿಗೆ ಮಾಶಾಸನ ನೀಡಲಾಗಿದೆ ಮತ್ತು ಈ ಬಾಬ್ತಿನಲ್ಲಿ ವೆಚ್ಚ ಮಾಡಲಾದ ಹಣದ ವೊತ್ತವೆಷ್ಟು ?

ಆ) ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕಿನಲ್ಲಿ ಅನುಕ್ರಮವಾಗಿ ಎಷ್ಟು ವಿಧವೆಯರು ಮಾಶಾಸನ ಕೋರಿ ಅರ್ಜಿ ಸಲ್ಲಿಸಿದ್ದಾರೆ ಮತ್ತು ಈ ಬಗ್ಗೆ ಎಷ್ಟು ಅರ್ಜಿಗಳು ತಿರಸ್ಕರಿಸಲಾಗಿವೆ.

ಇ) ಅರ್ಜಿಗಳನ್ನು ತಿರಸ್ಕರಿಸುವಾಧಿ ಸರಿಯಾದ ಕಾರಣಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಅನುಸರಿಸದಿದ್ದಲ್ಲಿ ಅಂತ ಅರ್ಜಿಗಳ ಮರು ಪರಿಶೀಲನೆಯ ಬಗ್ಗೆ ಸರಕಾರದವರು ಆಜ್ಞೆ ಹೊರಡಿಸುವರೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಇಲ್ಲಿಯವರೆಗೆ ಬಂದಿರುವ ಮಾಹಿತಿಯ ಪ್ರಕಾರ ೧,೯೨೯೧೮ ವಿಧವೆಯರಿಗೆ ಮಾಶಾಸನವನ್ನು ಮಂಜೂರು ಮಾಡಲಾಗಿದೆ ಮತ್ತು ೩,೨೪,೩೪,೩೮೩ ರೂಪಾಯಿಗಳನ್ನು ಈ ಯೋಜನೆಯಡಿಯಲ್ಲಿ ಖರ್ಚು ಮಾಡಲಾಗಿದೆ.

ಆ) ಹೊನ್ನಾವರ ತಾಲ್ಲೂಕಿನಲ್ಲಿ ೨೪೯೬ ವಿಧವೆಯರು ಅರ್ಜಿಗಳನ್ನು ಸಲ್ಲಿಸಿದ್ದು, ಅದರಲ್ಲಿ ೧೪೬೬ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಹಾಗೆಯೇ ಭಟ್ಕಳ ತಾಲ್ಲೂಕಿನಲ್ಲಿ ೬೪೦ ಅರ್ಜಿಗಳು ಬಂದಿದ್ದು, ಅವುಗಳಲ್ಲಿ ೧೯೫ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಇ) ಹೌದು

ಸಂಖ್ಯೆ : ಎಸ್‌ಡಬ್ಲ್ಯೂಎಲ್ ೩೩ ಎಸ್‌ಡಬ್ಲ್ಯೂಡಬ್ಲ್ಯೂ ೮೫.

ಶ್ರೀ ಆರ್. ಎನ್. ನಾಯ್ಕ.—ಮಾನ್ಯ ಅಧ್ಯಕ್ಷರೇ, ೩೦ನೆಯ ಕ್ರಮಾಂಕದ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟ ಉತ್ತರಕ್ಕೆ ಸಂಬಂಧಪಟ್ಟಂತೆ ಈ ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ಇದರ ಬಗ್ಗೆ ತಾವುಗಳು ಯಾವ ಅಧಿಕಾರಿಗಳಿಗೆ ಆಜ್ಞೆಯನ್ನು ಕೊಡುತ್ತಿದ್ದೀರಿ ? ಇದನ್ನು ತಾವುಗಳು ದಯವಿಟ್ಟು ತಿಳಿಸಬೇಕು. ತಹಶೀಲ್ದಾರರಿಗೆ ಕಳುಹಿಸುತ್ತೇವೆ, ಅವರು ಮಂಜೂರು ಮಾಡುತ್ತಾರೆ ಎಂದು ಇಟ್ಟು ಕೊಂಡರೆ. ಬಂದು ಮೇಲೆ ಅವರು ಮಂಜೂರು ಮಾಡದಿದ್ದರಿಂದ ಸಂದರ್ಭಗಳಲ್ಲಿ ನಾವು ಯಾರನ್ನು ಕೆಳಬೇಕು ? ಇದನ್ನು ತಾವುಗಳು ದಯವಿಟ್ಟು ನೋಟ್ ಮಾಡಿಕೊಳ್ಳಬೇಕು. ಹೊನ್ನಾವರ ತಾಲ್ಲೂಕಿನ ಮಾಗೋಡು ಊರಿನ ೩೦ ಅರ್ಜಿಗಳಲ್ಲಿ ಕೇವಲ ಒಂದು ಮಾತ್ರ ಮಂಜೂರು ಆಗಿದೆ, ಅವರುಗಳು ತುಂಬಾ ಬಡವರಾಗಿದ್ದಾರೆ, ಇಂತಹ ಸಂದರ್ಭದಲ್ಲಿ ಅವರಿಗೆ ಈ ಮಾಸಾಶನದ ಅಗತ್ಯತೆ ಇದೆ. ದಯಮಾಡಿ ಅವರಿಗೆ ಪುನಃ ಪರಿಶೀಲನೆ ಮಾಡಿಸಿ ಕೊಡಬೇಕು ಹಾಗೆಯೇ ಆವರು ಯಾವ ಅಧಿಕಾರಿಯ ಕಡೆಗೆ ಹೋಗಬೇಕೆಂಬುದನ್ನು ತಿಳಿಸಬೇಕು.

ಶ್ರೀ ವಸಂತರಾವ್ ಪಾಟೀಲ್.—ತಿರಸ್ಕಾರ ಮಾಡಿದ ಎಲ್ಲಾ ಅರ್ಜಿಗಳನ್ನು ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ. ನೀವು ಹೇಳಿದಂತೆ ಸಕಾರಣವಾದ ಅರ್ಜಿಗಳನ್ನು ಮಾತ್ರ ನೋಡಬಹುದು.

ಶ್ರೀ ಆರ್. ಎನ್. ನಾಯ್ಕ,—ಹೇಳಿಕೆಯಲ್ಲಿ ಹೌದು ಎಂದು ಇದೆ.

ಶ್ರೀ ವಿ. ಎಲ್. ಪಾಟೀಲ್.—ಎಲ್ಲಿಯೇ ಆದರೂ ಎಲ್ಲಾ ಅರ್ಜಿಗಳನ್ನು ಮರುಪರಿಶೀಲನೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ನಾಯ್ಕ.—ನಾನು ಬರವಣಿಗೆಯಲ್ಲಿ ಕೇಳಿದ್ದೇನೆ.

ಏನು ಹೌದು ಎಂದು ಹೇಳಿದಾಗ ನಜರಿಗೆ ಏಕೆ ತರಬೇಕು ? ಈಗ ನನ್ನ ಅಭಿಪ್ರಾಯದಲ್ಲಿ ಎಲ್ಲಾ ಮರುಪರಿಶೀಲನೆ ಮಾಡಿಸುತ್ತೀರಿ ಎನ್ನುವ ಅಭಿಪ್ರಾಯ ಬಂದಿದೆ,

ಶ್ರೀ ವಿ. ಎಲ್ ಪಾಟೀಲ್.—ಸರಿಯಾದ ಕಾರಣಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟರೆ ನಾವು ಮರುಪರಿಶೀಲನೆ ಮಾಡುತ್ತೇವೆ.

ಶ್ರೀ ಆರ್. ಎನ್. ನಾಯ್ಕ.—ಯಾವ ಅಧಿಕಾರಿಗಳನ್ನು ನಾವು ಕೇಳ ಬೇಕೆಂಬುದನ್ನು ಸರಿಯಾಗಿ ತಾವು ಹೇಳಿದರೆ, ಹಾಗೆ ಮಾಡುತ್ತೇವೆ. ಈಗ ತಹಶೀಲ್ದಾರರು ಮಂಜೂರು ಮಾಡುವವರಾಗಿದ್ದಾರೆ. ಪುನಃ ಮರು ಪರಿಶೀಲನೆಗೆ ನೀವು ಅವರಿಗೇ ಕೊಟ್ಟರೆ ಅವರು ಹೇಗೆ ಮಾಡುತ್ತಾರೆ ? ಬೇರೆ ಅಧಿಕಾರಿಗಳಿಗೆ ಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್ —ನಾವು ಡಿ.ಸಿ ಯವರಿಗೆ ಕೊಡುತ್ತೇವೆ. ಅವರು ಪರಿಶೀಲನೆ ಮಾಡುತ್ತಾರೆ. ತಪ್ಪು ಎಂದು ಕಂಡು ಬಂದರೆ, ಅಂತಹ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್. ನಾಯ್ಕ.—ನಾನು ಕ್ರಮ ತೆಗೆದುಕೊಳ್ಳುವ ವಿಷಯ ಕೇಳಿಲ್ಲ. ಸುಮ್ಮನೆ ಒಬ್ಬರ ಮೇಲೆ ಕ್ರಮತೆಗೆದು ಕೊಂಡರೆ ಬಹಳ ಜನರಿಗೆ ಏನು ಪ್ರಯೋಜನವಾಗುತ್ತದೆ ? ದಯವಿಟ್ಟು ಸದನಕ್ಕೆ ತಿಳಿಸಿ. ಮರುಪರಿಶೀಲನೆ ಮಾತ್ರ ಮಾಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಮರುಪರಿಶೀಲನೆಗಾಗಿ ಅಸಿಸ್ಟೆಂಟ್ ಕಮೀಷನರ್ ಕಡೆಗೆ ಕೊಡುವ ಬಗ್ಗೆ ಯೋಚಿಸುತ್ತೇನೆ.

ಶ್ರೀ ಆರ್. ಎನ್. ನಾಯ್ಕ.—ಮಾಗೋಡು ಗ್ರಾಮದಲ್ಲಿ ಮರುಪರಿಶೀಲನೆ ಬಗ್ಗೆ ಕೇಳಿಕೊಂಡಿದ್ದಾರೆ, ಇದರ ಆಜ್ಞೆಯನ್ನು ಎ. ಸಿ ಯವರು ಮಾಡುತ್ತಾರೋ ಹೇಗೆ ?

ಶ್ರೀ ವೇದಾಂತ ಹೆಮ್ಮಿಗೆ.—ಸಮಾಜದಲ್ಲಿ ಗಂಡ ಸತ್ತವರಿಗೆ ಎಂದರೆ ವಿಧವೆಯರಿಗೆ ಮಾಸಾಶನ ಕೊಡುತ್ತೇವೆಂದು ಹೇಳುತ್ತಿರುವುದು ಈಗಿನ ವಿಷಯ. ಹಾಗೆಯೇ ಹೆಂಡತಿ ಸತ್ತು ವಿಧುರರಾದ ಗಂಡಸರಿಗೂ ಪೆನ್‌ಷನ್ ಕೊಡುತ್ತೀರೋ ?

ಅಧ್ಯಕ್ಷರು.—ಹೆಮ್ಮಿಗೆಯವರೇ, ಇನ್ನೊಮ್ಮೆ ಹೇಳಿ ?

ಶ್ರೀ ವೇದಾಂತ ಹೆಮ್ಮಿಗೆ.—ಸಮಾಜದಲ್ಲಿ ಹೆಂಗಸರು ಗಂಡಸರಿಗೆ ಸರಿಸಮ ಎಂದು ಹೇಳುತ್ತೀರಿ. ಆದರಂತೆ ವಿಧವೆಯರಿಗೆ ಮಾಸಾಶನ ಕೊಡುವ ರೀತಿಯಲ್ಲಿ ವಿಧುರರಿಗೂ ಕೊಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಅಶಕ್ತರಾದ ಗಂಡಸರು ಕಷ್ಟದಲ್ಲಿದ್ದರೆ, ಅದನ್ನೂ ಪರಿಶೀಲನೆ ಮಾಡುತ್ತೇವೆ. ಒಲ್ಡ ಏಜ್ ಪೆನ್‌ಷನ್ ಕೊಡುತ್ತಾ ಇದ್ದೇವೆ.

೧೯೮೩–೮೪ ಮತ್ತು ೮೪–೮೫ರ ಸಾಲಿನಲ್ಲಿ ಉಡುಪಿ ತಾಲ್ಲೂಕಿನ ಕಾಪು ಉಡುಂಪಿ ಮತ್ತು ಬ್ರಹ್ಮಾವರ ಕ್ಷೇತ್ರಗಳಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಖರ್ಚು ಮಾಡಿದ ಮೊಬಲಗಂ ಕುರಿತಂ.

೬೦. ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಲೋಕೋಪಯೋಗಿ ಜಲಾನಯನ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೮೩–೮೪ರ ಮತ್ತು ೧೯೮೪–೮೫ರಲ್ಲಿ ಲೋಕೋಪಯೋಗಿ ಇಲಾಖೆಯವರಿಂದ ಉಡುಂಪಿ ತಾಲ್ಲೂಕಿನ ಕಾಪು, ಉಡುಂಪಿ ಮತ್ತು ಬ್ರಹ್ಮಾವರ ಕ್ಷೇತ್ರಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿರುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು). —

ಉಡುಂಪಿ ತಾಲ್ಲೂಕಿನ ಕಾಪು ಉಡುಂಪಿ ಬ್ರಹ್ಮಾವರ ಕ್ಷೇತ್ರಗಳಲ್ಲಿ ೧೯೮೩–೮೪ ಮತ್ತು ೧೯೮೪–೮೫ರಲ್ಲಿ ಈ ಇಲಾಖೆಯಿಂದ ಸಂಪರ್ಕ ಮತ್ತು ಕಟ್ಟಡಗಳಿಗೆ ಖರ್ಚಾದ ಹಣದ ವಿವರ ಈ ಕೆಳಕಂಡಂತಿದೆ.

ವಿಧಾನ ಸಭಾ ಕ್ಷೇತ್ರ	ಖರ್ಚಿನ ವಿವರಗಳು (ರೂ.ಗಳಂ ಲಕ್ಷಗಳಲ್ಲಿ)					
	೧೯೮೩–೮೪ರ ಸಾಲಿನ ಖರ್ಚು			೧೯೮೪–೮೫ರ ಸಾಲಿನ ಖರ್ಚು (೨–೮೫ರವರೆಗೆ)		
		ಸಂಪರ್ಕ			ಸಂಪರ್ಕ	
	ಕಟ್ಟಡಗಳು	(ರಸ್ತೆ ಮತ್ತು) ಸೇತುವೆ	ಜುಮ್ಲಾ	ಕಟ್ಟಡಗಳು	(ರಸ್ತೆ ಮತ್ತು) ಸೇತುವೆ	ಜುಮ್ಲಾ
ಉಡುಪಿ.	೬.೪೫	೨೩.೪೯	೨೯.೯೪	೧೫.೫	೨೭.೦೫	೪೨.೫೫
ಬ್ರಹ್ಮಾವರ	೧.೩೯	೯.೯೬	೧೧.೩೫	೧.೧೪	೧೧.೧೮	೧೨.೩೨
ಕಾಪು.	೪.೨೬	೧೧.೭೫	೧೬.೦೧	೩.೨೭	೭.೦೫	೧೦.೩೨

ಶ್ರೀ ಬಸವರಾಜ್ (ಬ್ರಹ್ಮಾವರ).—ಎರಡು ವರ್ಷಗಳಲ್ಲಿ ಬ್ರಹ್ಮಾವರ ಕ್ಷೇತ್ರದಲ್ಲಿ ಎಷ್ಟು ಹೊಸ ಇಲಾಖಾ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೀರಿ ? ಅದಕ್ಕೆ ಎಷ್ಟು ಖರ್ಚು ಆಗಿದೆಯೆಂದಂ ಹೇಳಬೇಕಂ.